ಶ್ರೀ ಎಂ. ಪಿ. ಪ್ರಕಾಶ್.—(ವಾರ್ತಾ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಮಂತ್ರಿಗಳು).—ಅ) ಗಮನಿಸಲಾಗಿದೆ.

ಆ) ದಿನಾಂಕ. ೨೫-೫-೮೮ರಲ್ಲಿ ರಾಜ್ಯ ವಾರ್ತಾಮಂತ್ರಿಗಳ ಸಮ್ಮೇಳನ ದೆಹಲಿಯಲ್ಲಿ ನಡೆದಾಗ ಈ ವಿಷಯದ ಬಗ್ಗೆ ರಾಜ್ಯ ಸರ್ಕಾರ ಒತ್ತಾಯ ಮಾಡಿ ವಾರ್ತಾ ಮತ್ತು ಪ್ರಸಾರ ಸಚಿವಾಲಯ ರಾಜ್ಯದ ವಿವಿಡೆ ಇರುವ ದೂರದರ್ಶನ ಪ್ರಸಾರ ಕೇಂದ್ರಗಳನ್ನು ಬೆಂಗಳೂರು ಮುಖ್ಯ ಕೇಂದ್ರಕ್ಕೆ ಸಂಪರ್ಕ ಕಲ್ಪಿಸಿ ಕನ್ನಡ ಕಾರ್ಯಕ್ರಮಗಳನ್ನು ಬಿತ್ತರಿಸಲು ಒತ್ತಾಯಿಸಲಾಗಿದೆ.

ವರದಿಗಳನ್ನು ಒಪ್ಪಿಸುವುದು

ಶ್ರೀ ಬಿ.ಎ. ಉಪ್ಪಿನ್.—ವಿಧಾನಸಭೆಯ ಉಪಾಧ್ಯಕ್ಷರಾದ ಶ್ರೀ ಬಿ. ಆರ್. ಯಾವಗಲ್ ಅವರ ಪರವಾಗಿ, ಲೋಕೋಪಯೋಗಿ ಇಲಾಖೆ, ಕಾಡಾ ಹಾಗೂ ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಿಸಿದಂತೆ ಅರ್ಜಿಗಳ ಸಮಿತಿಯ (ಐದನೇ ವರದಿ) ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಶ್ರೀ ಚಂದ್ರಶೇಖರ ರೆಡ್ಡಿ ದೇಶ್‌ಮುಖ್ ಮಂದನ.—ಮಾನ್ಯ ಅಧ್ಯಕ್ಷರೆ, ನಾನು (ಅ) ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಮೇಲಿನ ಷಿಟನೇ ವರದಿ ಮತ್ತು (ಆ) ಕರ್ನಾಟಕ ಸಾಬೂನು ಮತ್ತು ವಾರ್ನಿಷ್ ಅನಿಲ ಕಾರ್ಖಾನೆ ಕುರಿತಂತೆ ಷಿಟನೇ ವರದಿಯನ್ನು ಸಭೆಯ ಮುಂದಿಡಬಯಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನು ಸಭೆಗೆ ಒಪ್ಪಿಸಲಾಗಿದೆ. ನಿಲುವಳಿ ಸೂಚನೆಯನ್ನು ಈಗಲೇ ತೆಗೆದುಕೊಳ್ಳೋಣವೇ ಅಥವಾ ೨ ಗಂಟೆಗೆ ತೆಗೆದುಕೊಳ್ಳೋಣವೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಲೇ ತೆಗೆದುಕೊಳ್ಳಿ.

(ಶ್ರೀ ಯಡಿಯೂರಪ್ಪನವರು ನಡುವೆ ಮಾತನಾಡಲು ಪ್ರಯತ್ನಿಸಿದರು)

ಅಧ್ಯಕ್ಷರು.—ಅವರು ಮೊದಲು ನೋಟೀಸ್ ಕೊಟ್ಟಿದ್ದಾರೆ. ಅವರದ್ದು ಮಂಗಿಯಲಿ ಆಮೇಲೆ ನಿಮ್ಮದನ್ನು ತೆಗೆದುಕೊಳ್ಳೋಣ. ನಿಮ್ಮದೂ ಅಡ್ಜರ್ನ್‌ಮೆಂಟ್ ಮೋಷನ್ ಇದೆ, ಆ ಬಗ್ಗೆ ನಿಮಗೆ ಆಗಲೇ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅವರ ನಿಲುವಳಿ ಸೂಚನೆ ಬಗ್ಗೆ ನನ್ನ ವಿರೋಧವಿಲ್ಲ.

ಅಧ್ಯಕ್ಷರು.—ವಿರೋಧ ಇಲ್ಲ, ಅವರದ್ದು ಮೊದಲು ಮುಂಗಿಯಲಿ. ಇವತ್ತೇ ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಖರ್ಗೆಯವರದ್ದನ್ನು ತೆಗೆದುಕೊಳ್ಳುವ ಬಗ್ಗೆ ನನ್ನ ಅಭ್ಯಂತರವಿಲ್ಲ. ಟೇಪ್‌ಫೋನ್ ಹಗರಣದ ಬಗ್ಗೆ ೨ ಗಂಟೆಗೆ ಚರ್ಚೆಗೆ ತೆಗೆದುಕೊಳ್ಳೋಣ ಎಂದೂ ತಾವು ನಿನ್ನೆ ದಿವಸ ಹೇಳಿದಿರಿ.

ಅಧ್ಯಕ್ಷರು.—ನಾನು ಕನ್ನಡದಲ್ಲಿ ಹೇಳುತ್ತಿದೇನೆಯೇ ಅಥವಾ ಯಾವ ಭಾಷೆಯಲ್ಲಿ ಹೇಳುತ್ತಿದೇನೆ ? ಅವರ ಟೆಲಿಫೋನ್ ಹಗರಣದ ವಿಷಯ ಮೊದಲು ಮುಗಿಯಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಆ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ನಾನು ಹೇಳುತ್ತಿರುವುದು ಬೇರೆ.

ಅಧ್ಯಕ್ಷರು.—ತಾವು ಈಗ ಏನನ್ನೂ ಪ್ರಸ್ತಾಪ ಮಾಡುವುದು ಬೇಕಾಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಅದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಟೆಲಿಫೋನ್ ಹಗರಣದ ಬಗ್ಗೆ ನಿನ್ನೆ ಪ್ರಸ್ತಾಪ ಮಾಡಿದಾಗ ಇವತ್ತು ೨ ಗಂಟೆಗೆ ತೆಗೆದುಕೊಳ್ಳೋಣವೆಂದು ಹೇಳಿದಿರಿ, ತೆಗೆದುಕೊಳ್ಳಿ. ನಾನು ಒಂದು ಪ್ರಮುಖವಾದ ವಿಷಯವನ್ನು ಇವತ್ತು ಬೆಳಿಗ್ಗೆ ೧೦ ಗಂಟೆಯೊಳಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಅದನ್ನು ನಾನು ಕಾನೂನು ಬದ್ಧವಾಗಿಯೇ

ತಂದಿದ್ದೇನೆ. ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅಗತ್ಯ ಇದ ರೆ ಅವಕಾಶ ಕೊಡಿ. ಇಲ್ಲದಿದ್ದರೆ ಇಲ್ಲ ಅನ್ನಿ. ಹಿಂದೂಗಳ ಭಾವನೆಗೆ ಧಕ್ಕೆ ಬರುವಂತೆ.....

ಅಧ್ಯಕ್ಷರು.—ಅವರದ್ದು ಮುಗಿಯಲಿ. ಅವರು ಮೊದಲು ಕೊಟ್ಟಿದ್ದಾರೆ. ತದನಂತರ ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅವರದ್ದಕ್ಕೆ ಮೊದಲೇ ಅವಕಾಶ ಕೊಡಿ. ನಿನ್ನೆಯ ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಹೇಳುತ್ತಿಲ್ಲ. ಇವತ್ತು ನಾನು ಬೆಳಿಗ್ಗೆ ಹೊಸದಾಗಿ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದೇನೆ. ತಮ್ಮಿಂದ ನನಗೆ ಏನು ಬೇಕು ಎಂದರೆ.....

ಅಧ್ಯಕ್ಷರು.—ಮೊದಲು ಅವರದ್ದು ಮುಗಿಯಲಿ, ನಂತರ ನಿಮ್ಮದು. ದಯವಿಟ್ಟು. ತಾವು ಕುಳಿತುಕೊಳ್ಳಬೇಕು. ಆಮೇಲೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನನ್ನದನ್ನು ಈಗ ತೆಗೆದುಕೊಳ್ಳಬೇಡಿ, ಅದಲ್ಲ ನಾನು ಹೇಳ ಬೇಕೆಂದಿರುವುದು. ಖರ್ಗೆಯವರು ಇವತ್ತು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿದ್ದರೆ ಅದನ್ನು ತೆಗೆದುಕೊಳ್ಳಿ. ನಾನು ಹೇಳಬೇಕೆಂದಿರುವುದು ಏನೆಂದರೆ, ನಿನ್ನೆ ಅಡ್ಜರ್ನ್‌ಮೆಂಟ್ ಮೋಷನ್...

ಅಧ್ಯಕ್ಷರು.—ಮೊದಲು ಅವರದ್ದು ಮುಗಿಯಲಿ, ನಂತರ ನಿಮ್ಮ ನೋಟೀಸ್ ಬಗ್ಗೆ ವಿಚಾರ ಮಾಡೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಟೆಲಿಫೋನ್ ಹಗರಣದ್ದು ಆಲ್ಲ, ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಕೊಡದಿದ್ದರೆ ಹೇಗೆ ? ಕೋಟ್ಯಾಂತರ ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವಂತ...

ಅಧ್ಯಕ್ಷರು.—ತಾವು ಹೇಳುವುದು ಯಾವುದೂ ರೆಕಾರ್ಡ್ ಆಗುವುದಿಲ್ಲ. ತಾವು ಕುಳಿತುಕೊಳ್ಳಿ ಅಂದರೆ ಕುಳಿತುಕೊಳ್ಳಬೇಕು. ನಿಮಗೆ ನಾನು ಈಗ ಮಾತನಾಡಲಿಕ್ಕೆ ಅವಕಾಶ ಕೊಟ್ಟಿಲ್ಲ. ಅವರದ್ದು ಮುಗಿಯಲಿ. ತಾವು ಕುಳಿತುಕೊಳ್ಳಿ. ನಾಗರತ್ನಮ್ಮನವರೇ, ತಾವು ಪ್ರಾರಂಭ ಮಾಡಿ.

ಶ್ರೀ ಬಿ.ಎಚ್. ಯಡಿಯೂರಪ್ಪ.—ದಯವಿಮಾಡಿ ಕ್ಷಮಿಸಿ. ನಾನು ಹೇಳುತ್ತಿರುವುದೇ ಬೇರೆ ವಿಷಯ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರು ನಮಗೂ ಹೇಳುವುದಕ್ಕೆ ಕೊಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಪಾಯಿಂಟ್ ಆಫ್ ಆರ್ಡರ್ ಎತ್ತುತ್ತೇನೆ.

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ರೆಕಾರ್ಡಿಗೆ ಹೋಗುವುದಿಲ್ಲ. ಅವರದ್ದು ಇನ್ನೂ ಶುರುವಾಗಿಲ್ಲ. ಆಗಲೇ ಪಾಯಿಂಟ್ ಆಫ್ ಆರ್ಡರ್ ಎಲ್ಲಿ ಬರುತ್ತದೆ ? ಈಗ ಪಾಯಿಂಟ್ ಆಫ್ ಆರ್ಡರಿನ ಪ್ರಶ್ನೆಯೇ ಇಲ್ಲ. ಅವರು ಪ್ರಾರಂಭ ಮಾಡಲಿ, ನಂತರ ಪಾಯಿಂಟ್ ಆಫ್ ಆರ್ಡರ್ ಎತ್ತುವಿರಂತೆ. ಈಗ ತಾವು ಕುಳಿತುಕೊಳ್ಳಿ.

ಶ್ರೀಮತಿ ಕೆ ಎಸ್. ನಾಗರತ್ನಮ್ಮ.—ಮಾತ್ಕೊಂಡಲ್ಲಿ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ.

ಅಧ್ಯಕ್ಷರು —ಅವರು ಇನ್ನೂ ಶುರು ಮಾಡಿಲ್ಲ. ಶುರು ಮಾಡಿದೆ ಪಾಯಿಂಟ್ ಆಫ್ ಆರ್ಡರ್ ಎಲ್ಲಿ ಬರುತ್ತದೆ ?